ಓ ಎಸ್ ನಂಃ 10/2013
ಡಿಡಬ್ಲ್ಯೂ:01

**ದಿನಾಂಕಃ 24.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು**

**ಮುಂದುವರಿದ ಪಾಟೀ ಸವಾಲುಃ ಶ್ರೀ ಆರ್.ಎಸ್.ಎಂ., ವಾದಿ ಪರ ವಕೀಲರಿಂದ**

ನಿಡಿ.1 ಅನ್ನು ಪಡೆಯಲು ನಾನು ಅರ್ಜಿ ಸಲ್ಲಿಸಿ ಮಾಹಿತಿಯನ್ನು ಪಡೆದಿರುತ್ತೇನೆ. ನಾನು ಪಂಚಾಯಿತಿ ಸೆಕ್ರೇಟರಿರವರಿಗೆ ಅರ್ಜಿಯನ್ನು ಸಲ್ಲಸಿರುತ್ತೇನೆ . ಯಾವ ದಿನಾಂಕ, ತಿಂಗಳು ಮತ್ತು ವರ್ಷ ಎಂದು ಹೇಳಲು ನೆನಪಿಲ್ಲ. ನಾನು ವಂಶವೃಕ್ಷವನ್ನು ಬರೆದುಕೊಟ್ಟು ಅರ್ಜಿ ಸಲ್ಲಿಸಿರುವುದಿಲ್ಲ, ಹಾಗೆಯೇ ಅರ್ಜಿ ಸಲ್ಲಿಸಿರುತ್ತೇನೆ. ನಾನು ವಂಶವೃಕ್ಷವನ್ನು ಪಡೆಯಲು ಸಲ್ಲಿಸಿದ್ದ ಅರ್ಜಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಅರ್ಜಿಯೊಂದಿಗೆ ನಮ್ಮ ಕುಟುಂಬದ ಸದಸ್ಯರ ವಿವರಗಳು ಹಾಗೂ ಊರಿನ ವಿಳಾಸವನ್ನು ನೀಡಿರುತ್ತೇನೆ. ಸದರಿ ದಾಖಲೆಯನ್ನು ಹೊರತು ಪಡಿಸಿ ಬೇರೆ ದಾಖಲೆಗಳನ್ನು ನೀಡಿರುವುದಿಲ್ಲ. ಅರ್ಜಿ ಸಲ್ಲಿಸಿದ ಒಂದು ವಾರಕ್ಕೆ ವಂಶವೃಕ್ಷವನ್ನು ಪಡೆದಿರುತ್ತೇನೆ. ಕಂದಾಯ ಅಧಿಕಾರಿಗಳು ನಮ್ಮ ಗ್ರಾಮಕ್ಕೆ ಬಂದು ಮಹಜರ್ ಕ್ರಮ ಜರುಗಿಸಿರುವುದಿಲ್ಲ. ಸಾಕ್ಷಿಯು ಮುಂದುವರಿದು ಗ್ರಾಮಸ್ಥರಲ್ಲಿ ನಮ್ಮ ಕುಟುಂಬದ ಬಗ್ಗೆ ವಿಚಾರಣೆ ಮಾಡಿ ವಂಶವೃಕ್ಷ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಕಂದಾಯ ಅಧಿಕಾರಿಗಳು ಯಾವ ದಿನಾಂಕದಂದು ಬಂದು ಯಾರನ್ನು ವಿಚಾರಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅಧಿಕಾರಿಗಳು ಬಂದಾಗ ನಾನು ಸ್ಥಳದಲ್ಲಿ ಇರಲಿಲ್ಲ. ಕಂದಾಯ ಅಧಿಕಾರಿಗಳು ವಂಶವೃಕ್ಷವನ್ನು ಬರೆದು ಇಟ್ಟುಕೊಂಡಿದ್ದು ನಮಗೆ ನೀಡಿರುತ್ತಾರೆ. ವಂಶವೃಕ್ಷಕ್ಕೆ ಸಾಕ್ಷಿದಾರರಾಗಿ ಯಾರು ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಡಿ.1 ಕ್ಕೆ ಕಂದಾಯ ಅಧಿಕಾರಿಗಳನ್ನು ಹೊರತು ಪಡಿಸಿ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ನಿಡಿ.55 ಅನ್ನು ತಿಪ್ಪೇಸ್ವಾಮಿರವರು ಪಡೆದಿರುತ್ತಾರೆ. ತಿಪ್ಪೇಸ್ವಾಮಿರವರ ತಂದೆಯ ಹೆಸರು ಭದ್ರಾನಾಯ್ಕ. ತಿಪ್ಪೇಸ್ವಾಮಿ ರವರು ಯಾವ ರೀತಿ ಸದರಿ ವಂಶವೃಕ್ಷವನ್ನು ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ತಿಪ್ಪೇಸ್ವಾಮಿರವರು ವಂಶವೃಕ್ಷಕ್ಕೆ ಅರ್ಜಿಯನ್ನು ಸಲ್ಲಿಸಿದ್ದು ನಾನು ನಾಡಕಚೇರಿಯಲ್ಲಿ ಒಂದು ಪ್ರತಿಯನ್ನು ಪಡೆದಿರುತ್ತೇನೆ. ನಿಡಿ.55 ಅನ್ನು ಪಡೆಯಲು ನಾಡಕಚೇರಿಯಲ್ಲಿ ಅರ್ಜಿ ಸಲ್ಲಿಸಿರುವುದಿಲ್ಲ. ತಿಪ್ಪೇಸ್ವಾಮಿ ನಮ್ಮ ಗ್ರಾಮದವರಾಗಿದ್ದು ಪರಿಚಯಸ್ಥರಾಗಿರುತ್ತಾರೆ. ತಿಪ್ಪೇಸ್ವಾಮಿ ರವರು ಯಾವ ಕಾರಣಕ್ಕಾಗಿ ವಂಶವೃಕ್ಷವನ್ನು ಪಡೆದಿದ್ದರು ಎಂದು ನನಗೆ ಗೊತ್ತಿಲ್ಲ.

ನಾಡಕಚೇರಿಯಲ್ಲಿ ಸಾಮಾನ್ಯವಾಗಿ ದೃಡೀಕೃತ ಪ್ರತಿಗಳನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ನಾನು ಜೆರಾಕ್ಸ್ ಪ್ರತಿಯನ್ನು ಪಡೆದಿರುತ್ತೇನೆ ಎಂದು ನುಡಿಯುತ್ತಾರೆ ಜೆರಾಕ್ಸ್ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ನಿಡಿ.55 ಅನ್ನು ಮೂಲ ಅಕ್ಷರಗಳಲ್ಲಿ ಬರೆಯಲಾಗಿರುತ್ತದೆ. ನಾನು ಜೆರಾಕ್ಸ್ ಪ್ರತಿಯನ್ನು ಪಡೆದಿರುತ್ತೇನೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ತಿಪ್ಪೇಸ್ವಾಮಿರವರು ವಂಶವೃಕ್ಷವನ್ನು ಯಾವ ಉದ್ದೇಶಕ್ಕಾಗಿ ಪಡೆದಿದ್ದರು ಎಂದು ನನಗೆ ಗೊತ್ತಿಲ್ಲ. ನಿಡಿ.55 ರಲ್ಲಿ ತಿಪ್ಪೇಸ್ವಾಮಿರವರ ಕುಟುಂಬದವರು ಇರುತ್ತಾರೆ. ನಿಡಿ.55 ಅನ್ನು ಯಾವ ದಿನಾಂಕ, ತಿಂಗಳು ಮತ್ತು ವರ್ಷದಂದು ಪಡೆದಿರುತ್ತೇನೆ ಎಂದು ಹೇಳಲು ಆಗುವುದಿಲ್ಲ. ನಿಡಿ.55 ರಲ್ಲಿರುವ ವಿಚಾರಗಳು ಸತ್ಯವಾಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಸ್ಥಳ ತನಿಖೆಯನ್ನು ಮಾಡಿ ನಿಡಿ .55 ಅನ್ನು ನೀಡಿರುವ ಬಗೆ ನನಗೆ ಗೊತ್ತಿಲ್ಲ. ನಮ್ಮ ವಂಶವೃಕ್ಷಕ್ಕೂ ಹಾಗೂ ನಿಡಿ.55 ರ ವಂಶವೃಕ್ಷಕ್ಕೂ ಹೊಂದಾಣಿಕೆ ಇರುತ್ತ ಎಂದು ನಿಡಿ .55 ಅನ್ನು ಹಾಜರು ಪಡಿಸಿರುತ್ತೇನೆ. ನಿಡಿ.1 ಅನ್ನು ನೀಡಿದ ಸೆಕ್ರೇಟರಿ ರವರ ಹೆಸರನ್ನು ಹೇಳಲು ಆಗುವುದಿಲ್ಲ. ನಿಡಿ .55 ನೀಡಿದ ಸೆಕ್ರೆಟರಿ ರವರ ಹೆಸರನ್ನು ಹೇಳಲು ಆಗುವುದಿಲ್ಲ. ವಾದಿಯರು ನಿಪಿ.1 ರಂತೆ ನಮ್ಮ ಕುಟುಂಬದ ವಂಶವೃಕ್ಷವನ್ನು ಹಾಜರು ಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ.1 ರ ಬಗ್ಗೆ ನಮ್ಮ ವಕೀಲರ ಮೂಲಕ ತಿವಿದುಕೊಂಡಿರುತ್ತೇನೆ. ನಿಪಿ.1 ನೈಜ ದಾಖಲೆಯಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ.1 ರ ಬಗ್ಗೆ ನಾನು ಯಾವುದೇ ಅಧಿಕಾರಿಗಳ ಮುಂದೆ ಪ್ರಶ್ನಿಸಿರುವುದಿಲ್ಲ.

ನಿಪಿ.7 ಚಂದ್ಲಿ ಬಾಯಿ ಯವರ ಚನಾವಣಾ ಗುರುತಿನ ಚೀಟಿ ಎಂದರೆ ನನಗೆ ಗೊತ್ತಿಲ್ಲ. ಚಂದ್ಲಿಬಾಯಿಯವರು ಜಂಭಯ್ಯನ ಹಟ್ಟಿಯಲ್ಲಿ ವಾಸವಾಗಿದ್ದು, ಮತಚಲಾವಣೆ ಮಾಡಿದ್ದರಿಂದ ನಿಪಿ.7 ಅನ್ನು ನೀಡಲಾಗಿರುತ್ತದೆ ಎಂದರೆ ಇರಬಹುದು. ವಾದಿಯರು ಜಂಭಯ್ಯಹಟ್ಟಿಯಲ್ಲಿ ವಾಸವಾಗಿದ್ದು, ಮತಚಲಾವಣೆ ಮಾಡಿದ್ದರಿಂದ ನಿಪಿ.8 ರಿಂದ 10 ಚುನಾವಣಾ ಗುರುತಿನ ಚೀಟಿ ನೀಡಲಾಗಿರುತ್ತದೆ ಎಂದರೆ ಇರಬಹುದು.

ನಿಪಿ.12 ಮತ್ತು 13 ವಾದಿಯರು ಜಂಭಯ್ಯಹಟ್ಟಿಯಲ್ಲಿ ವಾಸವಾಗಿರುವುದಕ್ಕೆ ನೀಡಿರುವ ದಾಖಲೆಗಳಾಗಿರುತ್ತವೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ವಾದಿಯರು ಜಂಭಯ್ಯನಹಟ್ಟಿಯಲ್ಲಿ ವಾಸವಾಗಿರುತ್ತಾರೆ, ಆದರೆ ನಮಗೆ ಯಾವುದೇ ಸಂಬಂಧವಿರುವುದಿಲ್ಲ ಎಂದು ನುಡಿಯುತ್ತಾರೆ.

ನಿಡಿ. 3 ಅನ್ನು ರಾಮ್ಜಿನಾಯ್ಕ , ಚಂದ್ರಾನಾಯ್ಕ ಮತ್ತು ನಂದ್ಯಾನಾಯ್ಕ ರವರ ತಂದೆ ಲಚ್ಮಾನಾಯ್ಕ ರವರು ಖರೀದಿಸಿದ ಸ್ವತ್ತಾಗಿರುತ್ತದೆ ಎಂದರೆ ಇರಬಹುದು.

**( ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.